# ಉದ್ದಿಮೆದಾರರಿಗೆ ನವೋದ್ಯಮಿ ಅವಾರ್ಡ್ಸ್

ಹುಬ್ಬಳ್ಳಿ: ಸಣ್ಣ ಉದ್ಯಮವನ್ನು ಪ್ರೋತ್ಸಾಹಿಸುವ ಸಲುವಾಗಿ ನವೋದ್ಯಮಿ ಅವಾರ್ಡ್ಸ್ 2019-20 ಸ್ಪರ್ಧೆಯನ್ನು ಇಲ್ಲಿನ ದೇಶಪಾಂಡೆ ಫೌಂಡೇಷನ್ ಆಯೋಜಿಸಿದೆ. ಉತ್ತರ ಕರ್ನಾಟಕ ಭಾಗದ ಹುಬ್ಬಳ್ಳಿ-ಧಾರವಾಡ, ಗದಗ, ಬೆಳಗಾವಿ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಣ್ಣ ಉದ್ದಿಮೆದಾರರು ಭಾಗವಹಿಸಬಹುದು. ಆಹಾರ ಪದಾರ್ಥಗಳ ಉತ್ಪಾದಕರು, ಕರಕುಶಲ, ಜವಳಿ ಮತ್ತು ಇತರೆ ಸಣ್ಣ ಉದ್ದಿಮೆದಾರರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಈ ಸ್ಪರ್ಧೆಗೆ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ಪರಿಶೀಲಿಸಿದ ನಂತರ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು. ವಿಜೇತ ಸ್ಪರ್ಧಿಗಳಿಗೆ ನಗದು ಬಹುಮಾನ ಕೊಡಲಾಗುವುದು. ಒಟ್ಟು ಬಹುಮಾನದ ಮೊತ್ತ 5 ಲಕ್ಷ ರೂ. ಇದೆ. ಪರಿಸರ ಸ್ನೇಹಿ ಹಾಗೂ ನೈತಿಕ ಮೌಲ್ಯ ಅನುಸರಿಸುತ್ತಿರುವ ಉದ್ದಿಮೆಗಳು, 18ರಿಂದ 45 ವಯೋಮಾನದ ಉದ್ದಿಮೆದಾರರು, 2 ಲಕ್ಷ ರೂ. ಅಥವಾ ಕಡಿಮೆ ಮಾಸಿಕ ವಹಿವಾಟು ಹೊಂದಿರುವ, ಬ್ಯಾಂಕ್‌ನಿಂದ ಬಾಕಿದಾರರಾಗಿರದ ಉದ್ದಿಮೆದಾರರು ಭಾಗವಹಿಸಬಹುದು. ಅರ್ಜಿ ಸಲ್ಲಿಸಲು ಜೂ. 15 ಕೊನೆಯ ದಿನವಾಗಿದೆ. ಮಾಹಿತಿಗೆ ಗೋಕುಲ ರಸ್ತೆಯ ದೇಶಪಾಂಡೆ ಫೌಂಡೇಷನ್‌ನ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ (ಮೊ.ಸಂ. 9686956691/9900035218) ಹಾಗೂ www.navodyami.org ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

Hubli Edition
May 28, 2019 Page No. 5
Powered by : eReleGo.com